ಅಧ್ಯಕ್ಷರ ಅನುಮತಿ ಕೋರಿ ಪ್ರಸ್ತಾಪಿಸಲಾದ ವಿಷಯ

(೧) ರಾಜ್ಯದಲ್ಲಿ ವಿದ್ಯುಚ್ಛಕ್ತಿ ಅಭಾವದಿಂದ ಕೋಟ್ಯಾಂತರ ರೂಪಾಯಿ ಬೆಳೆ ನಷ್ಟ

ಶ್ರೀ ವಾಟಾಳ್ ನಾಗರಾಜ್, (ಚಾಮರಾಜ ನಗರ).—ಮಾನ್ಯ ಅಧ್ಯಕ್ಷರೇ, ನಾನು ತಮಗೆ ಅನೇಕ ಬಾರಿ ಹೇಳಿದೆ ಮತ್ತು ಒಂದು ಗಮನ ಸೆಳೆಯುವ ಸೂಚನೆಯನ್ನು ತರಬೇಕು ಎಂದು ಹೇಳಿ, ಚಾಮರಾಜ ನಗರ ತಾಲ್ಲೂಕು ಸೇರಿದಂತೆ ಕರ್ನಾಟಕದ ಅನೇಕ ಕಡೆ ವಿದ್ಯುಚ್ಛಕ್ತಿ ಅಭಾವದಿಂದ ಕೋಟ್ಯಾಂತರ ರೂಪಾಯಿ ಬೆಳೆ ನಷ್ಟವಾಗುತ್ತಿದೆ ಎಂದು ಹೇಳಿ ಈ ಬಗ್ಗೆ ಸರ್ಕಾರ ಒಂದು ಹೇಳಿಕೆಯನ್ನು ಕೊಡಬೇಕು ಮತ್ತು ಸರ್ಕಾರ ಈ ಬಗ್ಗೆ ಏನು ಕ್ರಮ ಕೈಗೊಂಡಿದ್ದಾರೆ ಎಂದು ಹೇಳಿ, ಇದನ್ನು ಕೇಳಬೇಕೆಂದು ನಾನು ಸುಮಾರು ಒಂದು ವಾರದಿಂದ ತಮ್ಮನ್ನು ಅನೇಕ ಬಾರಿ ಭೇಟಿಮಾಡಿದೆ ಮತ್ತು ತಾವು ಅದನ್ನು ಗಮನ ಸೆಳೆಯುವ ಸೂಚನೆಯನ್ನಾಗಿ ಪರಿವರ್ತನೆ ಮಾಡಿದ್ದೀರಿ. ಈ ಗಮನ ಸೆಳೆಯುವ ಸೂಚನೆ ಸಹ ಇವತ್ತು ಬರದೇ ಇರುವಂಥ ಪರಿಸ್ಥಿತಿ ಇರುವುದರಿಂದ ಇದು ಅತ್ಯಂತ ಮಹತ್ವರವಾದಂಥ ಪ್ರಶ್ನೆ. ಸರ್ಕಾರ ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ ? ನನಗನ್ನಿಸುತ್ತದೆ. ಬರೇ ಚಾಮರಾಜನಗರ ತಾಲ್ಲೂಕು ಒಂದರಲ್ಲೇ, ಕನಿಷ್ಟ ಎರಡು ಕೋಟಿ ರೂಪಾಯಿ ಗಳಷ್ಟು ಬೆಳೆ ನಷ್ಟವಾಗುತ್ತಿದೆ. ಟಬ್ಬಿನ ಬೆಳೆ ಒಣಗುತ್ತಾ ಇದೆ. ಈರುಳ್ಳಿ ಬೆಳೆ ಒಣಗುತ್ತಾ ಇದೆ, ವೋಲ್ಟೇಜ್ ಇಲ್ಲ, ಕಾಲಕ್ಕೆ ತಕ್ಕಂತೆ ವಿದ್ಯುಚ್ಛಕ್ತಿ ಬರುತ್ತಾ ಇಲ್ಲ. ಈ ಪ್ರಕಾರ ಇಡೀ ಮೈಸೂರು ಜಿಲ್ಲೆ ಒಂದೇ ಅಲ್ಲ, ಕರ್ನಾಟಕದ ಅನೇಕ ಭಾಗಗಳಲ್ಲಿ ಈ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ಸರಿಪಡಿಸುವುದಕ್ಕೆ ಸರ್ಕಾರ ಈವರೆಗೂ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಬರೇ ಗ್ರಾಮಾಂತರ ಪ್ರದೇಶ ಒಂದರಲ್ಲೇ ಅಲ್ಲ, ಪಟ್ಟಣ ಪ್ರದೇಶದಲ್ಲಿ ಕೂಡ ವಿದ್ಯುಚ್ಛಕ್ತಿ ಅಭಾವದಿಂದಾಗಿ ತೀವ್ರವಾದ ತೊಂದರೆಯಾಗುತ್ತಿದೆ. ಬೆಂಗಳೂರು ನಗರದಲ್ಲಿಯೂ ಅಷ್ಟೇ. ಬೆಳಿಗ್ಗೆ ಸುಮಾರು ಐದು ಗಂಟೆಗೆ ವಿದ್ಯುಚ್ಛಕ್ತಿ ಹೋದರೆ ಹನ್ನೆರಡು ಗಂಟೆವರೆಗೆ ಆದರೂ ವಿದ್ಯುಚ್ಛಕ್ತಿ ಬರದೇ ಇರುವಂಥ ಪರಿಸ್ಥಿತಿ ಉದ್ಭವವಾಗಿದೆ. ಇಂತಹ ಒಂದು ಜವಾಬ್ದಾರಿಯುತ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದ್ದಾರೆ ಎಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಕೇಳುತ್ತಿದ್ದೇನೆ. ಈ ಬಗ್ಗೆ ಯಾರಾದರೂ ಸಚಿವರು ಉತ್ತರ ಕೊಡಬೇಕು. ಏಕೆಂದರೆ, ಸಂಬಂಧಪಟ್ಟ ಸಚಿವರು ಉಪ ಮುಖ್ಯಮಂತ್ರಿಗಳು ಇಲ್ಲಿ ಇಲ್ಲ. ಪ್ರಶ್ನೆಯಿಂದ ನಾನೂ ಯಾರಾದರೂ ಸಚಿವರು ಎಂದು ಹೇಳುತ್ತೇನೆ. ಇಲ್ಲಿ ಕುಳಿತಿರ ತಕ್ಕಂಥ ಯಾರಾದರೂ ಸಚಿವರು ಸರ್ಕಾರದ ಪರವಾಗಿ ಏನಾದರೂ ನೀವು ಇದರ ಬಗ್ಗೆ ಸಮಜಾಯಿಷಿ ಹೇಳುತ್ತೀರಾ ? ಏನು ಮಾಡುತ್ತೀರಿ ಎನ್ನುತಕ್ಕಂಥ ಪ್ರಶ್ನೆಯನ್ನು ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ ಅಧ್ಯಕ್ಷರೇ. ಇದು ಅತ್ಯಂತ ಶೋಚನೀಯವಾದಂಥ ಪರಿಸ್ಥಿತಿ. ಇದು ಎರಡು ಕೋಟಿ ರೂಪಾಯಿಯಷ್ಟು ಬೆಳೆ ಚಾಮರಾಜನಗರ ತಾಲ್ಲೂಕಿನಲ್ಲಿಯೇ ನಷ್ಟವಾಗುತ್ತಿದೆ ಎಂದು ಹೇಳಿದರೆ ಈ ಹಣ ಕೊಡುವವರು ಯಾರು ? ಇವತ್ತು ಎರಡು ಸಾವಿರ ರೂಪಾಯಿಗೆ ಒಂದು ಕ್ವಿಂಟಾಲ್ ತೆಗೆದುಕೊಂಡು ಬೆಳೆ ಜಿತ್ತಿದ್ದಾರೆ. ಇವತ್ತು ಆ ಬೆಳೆ ಸಂಪೂರ್ಣವಾಗಿ ನಾಶವಾಗುತ್ತಾ ಇದೆ. ಈ ನಾಶವನ್ನು ಸರಿಪಡಿಸುವುದಕ್ಕೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಯಾವಮಂತ್ರಿಗಳಾದರೂ ಇದರ ಬಗ್ಗೆ ಸಮಂಜಸವಾದಂಥ ಪರಿಣಾಮಕಾರಿಯಾದಂಥ ಉತ್ತರವನ್ನು ಕೊಡಬೇಕು ಎಂದು ನಾನು ತಮ್ಮ ಮೂಲಕ ನಾನು ಕೇಳುತ್ತಿದ್ದೇನೆ. ಸರ್ಕಾರದಿಂದ ಒಂದು ಪ್ರಾಮಾಣಿಕ ಪ್ರಯತ್ನ ಮಾಡಿರುವ ಬಗ್ಗೆ ಬರದಿದ್ದರೆ ನಾನು ಸದನದಲ್ಲಿ ಧರಣಿ ಮಾಡಬೇಕಾಗುತ್ತದೆ ಎಂದು ತಮ್ಮ ತಮ್ಮ ಮೂಲಕ ನಾನು ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರದ ನಿರ್ಧಾರವೇನು, ಸರ್ಕಾರ ಏನು ಮಾಡಿದೆ ಎಂಬುದನ್ನು ಹೇಳಬೇಕು.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

SRI. QUMARUL ISLAM.—Sir, this is the situation prevailing all over the State and not only in Chamrajanagar

ಶ್ರೀ ವಾಟಾಳ್ ನಾಗರಾಜ್.—ಇದು ರಾಜ್ಯದಲ್ಲೇ ಬಂದಿರುವಂಥ ಒಂದು ಕರಾಳ ಪರಿಸ್ಥಿತಿ. ಇದನ್ನು ಹೋಗಲಾಡಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ? ಈ ಬಗ್ಗೆ ಸರ್ಕಾರ ತೀವ್ರವಾಗಿ ಹೇಳಬೇಕು. ಆದ್ದರಿಂದ ನಾನು ತಮ್ಮ ಮೂಲಕ ಕೇಳುತ್ತಿದ್ದೇನೆ, ಈ ಸರ್ಕಾರದ ಮಂತ್ರಿಗಳು ಈ ಬಗ್ಗೆ ಉತ್ತರ ಕೊಡಲೇಬೇಕು. ಅದನ್ನು ಒತ್ತಾಯ ಮಾಡಿ ನಾನು ಧರಣಿ ಮಾಡುತ್ತೇನೆ. ಯಾಕೆಂದರೆ ಇಲ್ಲಿ ಯಾರೂ ಉತ್ತರ ಕೊಡತಕ್ಕಂಥ ಮಂತ್ರಿಗಳು ಇಲ್ಲ. ಸರ್ಕಾರ ಇದೆಯೇ ಎಂದು ನಾನು ಕೇಳುತ್ತೇನೆ.

(ಮಾನ್ಯ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂಭಾಗದ ಅವರಣಕ್ಕೆ ಬಂದರು)

ಉಪಾಧ್ಯಕ್ಷರು.:—ಶ್ರೀ ಪಾಟಾಳ್‌ರವರೇ, ತಾವು ದಯಮಾಡಿ ತಮ್ಮ ಜಾಗಕ್ಕೆ ಹೋಗಿ ಕುಳಿತು ಕೋಳ್ಳಿ. ನಾನು ಹೇಳುತ್ತೇನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬೇಡಿಕೆಯನ್ನು ಮಂಡಿಸಿದ ಕೂಡಲೇ ಹೀಗೆ ಒಳಗಡೆ ಬಂದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಉತ್ತರ ನಿರೀಕ್ಷೆ ಮಾಡಬೇಕಾದರೂ ಸ್ವಲ್ಪ ಕಾಲ ಬೇಕಾಗುತ್ತದೆ. ನೀವು ಅಲ್ಲಿ ಹೇಳಿದ ತಕ್ಷಣವೇ ಬಾವಿಗೆ ಬಂದುಬಿಟ್ಟರೆ ನಾವು ಏನು ಮಾಡಬೇಕು ?

ಉಪಾಧ್ಯಕ್ಷರು.—ಪಾಟಾಳ್ ನಾಗರಾಜ್‌ರವರೇ, ತಾವು ತಮ್ಮ ಸೀಟಿಗೆ ಹೋಗಿ. ಸಂಬಂಧಪಟ್ಟ ಮಂತ್ರಿಗಳನ್ನು ಕರೆಸುತ್ತೇನೆ. ಮಧ್ಯಾಹ್ನ ಊಟದ ನಂತರ ಕರೆಯಿಸಿ ನಿಮಗೆ ಉತ್ತರ ಕೊಡಿಸುವುದಕ್ಕೆ ನಾನು ಏರ್ಪಾಡು ಮಾಡುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆದ್ದರಿಂದ, ತಾವು ಸ್ವಲ್ಪ ಕಾಲಾವಕಾಶವನ್ನು ಕೊಟ್ಟರೆ ಈ ದಿವಸ ಸಮಾಲೋಚನೆ ಮಾಡಿ, ಇವತ್ತಿನ ಅವಧಿಯೊಳಗಾಗಿ ನಾನು ತಿಳಿಸುತ್ತೇನೆ.

ಶ್ರೀ ಪಾಟಾಳ್ ನಾಗರಾಜ್.—ಐದು ಗಂಟೆಯೊಳಗಾಗಿ ಉತ್ತರ ಕೊಡಿಸುತ್ತೀರಾ ಸ್ವಾಮಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಯ್ಯೋರಾಮ, ಐದು ಗಂಟೆಯೊಳಗಾಗಿ ಎಂದರೆ, ಇದು ಐದು ಗಂಟೆಗೇ ಪೂರೈಸುತ್ತದೋ, ಆರು ಗಂಟೆಗೆ ಆಗುತ್ತದೋ, ಇನ್ನು ಮುಂಜಿಯೇ ಆಗುತ್ತದೋ ಎಂಬುದು ಗೊತ್ತಿಲ್ಲ.

ಉಪಾಧ್ಯಕ್ಷರು.—ಸಂಬಂಧಪಟ್ಟವರನ್ನು ನಾನು ಕರೆಸುತ್ತೇನೆ. ತಾವು ದಯಮಾಡಿ ತಮ್ಮ ಜಾಗಕ್ಕೆ ಹೋಗಿ.

ಶ್ರೀ ಪಾಟಾಳ್ ನಾಗರಾಜ್.—ಹಾಗಾದರೆ ಉತ್ತರ ಕೊಡಿ ಸ್ವಾಮಿ.

(ಮಾನ್ಯ ಸದಸ್ಯರಾದ ಶ್ರೀ ಪಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನಕ್ಕೆ ಹಿಂತಿರುಗಿದರು)

ವಿವಾಹಿತ ಹೆಣ್ಣು ಮಂಗಳನ್ನು ಅಪಹರಿಸಿಕೊಂಡು ಹೋಗಿರುವ ಬಗ್ಗೆ

†SR. QUMARUL ISLAM.—Sir, in my constituency, a lady by name Smt. Kavita, who was married just 15 days back has been kidnapped on 19th She is a student of B.A. II. She had been to the college to collect her Hall Ticket. She is the wife of one Engineering student Mr. Sunil Deshpande. She was kidnapped near Tirandaz Talkies which is called Jagat area. The Hon. Minister knows that area very well. When she had gone to collect the Hall Ticket or the TC, she was kidnapped.

MR. DEPUTY SPEAKER.—By whom ?

SRI QUMARUL ISLAM.—Had, I known whom, I would not have raised this matter. Sir, when the complaint was lodged in the Ashoknagar Police Station and Brahampura Police Station people have treated this matter very lightly. They told that she is adult and what can we do. They have not at all investigated this matter till today. Their parents and relatives personally went to the

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ